


ಎಡದಿಂದ ಬಲಕ್ಕೆ:

1. ಆ ಕಪಿಯ ತಂಟೆಗೆ ಹೋದರೆ ತೊಂದರೆ ಖಂಡಿತ 3
3. ಪ್ರವಚನದಲ್ಲಿ ವಿವರಿಸಿದ್ದು ಪಂಚಭೂತಗಳಿಂದಾದ ಜಗತ್ತು 3
4. ಆ ಪ್ರದೇಶದಲ್ಲಿ ವಾಸಿಸಲು ತಕ್ಕಂತಿದೆ ಮನೆ 3
6. ಸರ್ವ ರುಚಿಗಳನ್ನೂ ಅರಿಯಬಲ್ಲದ್ದು ಇದೊಂದೇ ಅಂಗ 3
7. ಪೆದ್ದನಿಗೇನು ಗೊತ್ತು? ಇದು ಕಷ್ಟಕಾಲಕ್ಕೆ ಇಟ್ಟಿರುವ ಹಣ 4
9. ಮೂರ್ತಿಯ ಮುಖಾಲಂಕಾರಕ್ಕೆ 'ಪವಿತ್ರ ಪುಂಡ್ರ' 4
11. ಜೋಡಿಸಲು ಹೋದಾಗ ಸುರಿದದ್ದು ತುಂಬ ಬಿಸಿ ನೀರು 4
13. ಪ್ರತಿ ಪಕ್ಷದಲ್ಲೂ ಒಬ್ಬನಿದ್ದಾನೆ ನೂರು ಸಾವಿರಗಳ ಒಡೆಯ 4
15. ನಭವನ್ನೇ ಮುಟ್ಟುವಂತಿದೆ ಅದ್ಭುತ ಕಟ್ಟಡ 3
17. ಗುರಿಯನ್ನು ತಲುಪಲು ನೆರವಾದದ್ದು ಈ ಶಹರ 3
18. ವಿಚಕ್ಷಣೆಯಿಂದ ಕೆಲಸವನ್ನು ಗಮನಿಸುತ್ತಿದ್ದಾನೆ ನೋಡುಗ 3
19. ಮುಸುಕಿನೊಳಗೇ ಅಡಗಿಯೂ ಇದೆಂಥ ಸಂತಸ! 3

ಮೇಲಿಂದ ಕೆಳಕ್ಕೆ:

1. ಅಚ್ಚರಿ ಆಯಿತೇಕೆ? ಅದೊಂದು ನಿರ್ಜೀವಿ 3
2. ವಾಯುಮಾಲಿನ್ಯಕ್ಕೆ ಕಾರಣನಾದ ಅನ್ಯದೇಶೀಯ 3
3. ಆ ದೇಗುಲದ ಪ್ರಸಾದ, ತುಂಬ ಹೆಸರುವಾಸಿ 3
5. ಮೇರೆ ಮೀರುತ್ತಿದೆ ನೋಡಿ, ಆಕೆಯ ಗರ್ವ, ಸೊಕ್ಕು 3
7. ಆಶಯಗಳು ಏನೇ ಇರಲಿ, ಸದ್ಯಕ್ಕೆ ಅವರನ್ನೇ ಅವಲಂಬಿಸು 4
8. ನಡುಕಕ್ಕೆ ತಕ್ಕದ್ದಲ್ಲ, ಇದಿನ್ನೂ ಮಧ್ಯದ ಸಮಯ 4
9. ಗೊತ್ತಿಲ್ಲದ್ದೇನಲ್ಲ; ಇದು ಎಳ್ಳಿನದೇ ಎಣ್ಣೆ 4
10. ಮದುವೆಯಂತಿರುವ ಸಮಾರಂಭದಲ್ಲಿ ಹಾಡಿದ್ದು ಜೇನು ಭರಿತ ರಾಗ 4
12. ಜೊತೆಗಿರಲು ಬಂದವನ ಬಗೆಗೆ ಇರಲಿ ಜೋಪಾನ 3
14. ತಕ್ಷಣಕ್ಕಷ್ಟೇ ಈ ಸಂತಸ; ಅದು ಅತ್ಯಲ್ಪ ಕಾಲದ್ದು 3
15. ಸಾಂಬಾರಿನ ಕೆಟ್ಟ ರುಚಿಯನ್ನು ಹೇಗೋ ಸಹಿಸಿಕೋ 3
16. ಈ ವಿನ್ಯಾಸವನ್ನು ನೋಡಿದಿರಾ? ತುಂಬ ಹೊಸದು ಹೌದಲ್ಲ? 3

## 29-10-2020 ಉತ್ತರಗಳು

ಎಡದಿಂದ ಬಲಕ್ಕೆ:

1.ಅಸಮ್ಮತ 3. ಗಾಬರಿ 4. ಪಿನಾಕ 6. ಕೆರಳಿಸು 7. ಅನುಮಾನ 8. ಹಟಗಾರ 10. ನಸುನಗು 12. ಕನವರ 14. ವಿಷಾನಿಲ 16. ತೆಪರ 17. ವರಾಹ 18. ಸಮರ್ಪಣ

ಮೇಲಿಂದ ಕೆಳಕ್ಕೆ:

1. ಅರಿಕೆ 2. ತಪಿಸು 3. ಗಾಳಿಮಾತು 5. ಕಪಟ 7. ಅಸ್ತಮಾನ 9. ರತ್ನಾಕರ 11. ನವ್ಯತೆ 13. ಧನದಾಹ 14. ವಿರಸ 15. ಲವಣ

ಪ್ರಶ್ನಾಂಕಣ

# ಇಗ್ಲೂ ಎಂದರೇನು?

ಇಗ್ಲೂ ಅದೊಂದು ವಿಶಿಷ್ಟ ಬಗೆಯ ಮನೆ. ಇಂಥ ಮನೆಗಳನ್ನು ನಿರ್ಮಿಸಿ ಬಳಸುವ 'ಇನೂಯಿಟ್' ಜನರ (ಅವರಿಗೇ ಎಸ್ಕಿಮೋಗಳೆಂದೂ ಹೆಸರಿದೆ) ಭಾಷೆಯಲ್ಲಿ ಇಗ್ಲೂ ಎಂದರೆ 'ಹಿಮದ ಮನೆ' ಎಂದರ್ಥ. ಇಗ್ಲೂದ ವಾಸ್ತವ ಸ್ವರೂಪ ಅದೇ.

ಆದರೆ, ವಾಸ್ತವವಾಗಿ ಇಗ್ಲೂ 'ಶಾಶ್ವತ ಗೃಹ' ಅಲ್ಲ. ಆರ್ಕ್ಟಿಕ್ ಪ್ರದೇಶಕ್ಕೆ (ಚಿತ್ರ 1) ಸೇರಿದ ಸೈಬೀರಿಯಾ, ಅಲಾಸ್ಕ ಮತ್ತು ಗ್ರೀನ್ ಲ್ಯಾಂಡ್‌ಗಳಲ್ಲಿ ಅಲ್ಲಿನ ಸ್ಥಳೀಯ ಜನರಾದ ಇನೂಯಿಟ್‌ಗಳು ಚಳಿಗಾಲದಲ್ಲಿ ಪ್ರಾಣಿಗಳನ್ನು ಬೇಟೆಯಾಡಿ ಶೇಖರಿಸಿ ತರಲು ತಮ್ಮ ಹಳ್ಳಿಗಳಿಂದ ದೂರ ದೂರ ಹೋಗಿ ಹಿಮಹಾಸುಗಳಿಂದ ಆವರಿಸಲ್ಪಟ್ಟ ತೆರೆದ ಬಯಲುಗಳಲ್ಲಿ (ಚಿತ್ರ 2) ಒಂದೆರಡು ತಿಂಗಳ ಕಾಲ ತಂಗಲು ನಿರ್ಮಿಸಿಕೊಳ್ಳುವ ತಾತ್ಕಾಲಿಕ ಮನೆಗಳೇ ಇಗ್ಲೂಗಳು. ಅಸಹನೀಯ ಚಳಿ ಮತ್ತು ಅತಿ ಶೀತಲ ಬಿರುಗಾಳಿಗಳಿಂದ ರಕ್ಷಣೆ ಪಡೆಯುವುದು ಇಗ್ಲೂಗಳ ನಿರ್ಮಾಣದ ಉದ್ದೇಶ.

'ಹಿಮದ ಮನೆ' ಎಂಬ ಹೆಸರಿಗೆ ತಕ್ಕಂತೆ ಇಗ್ಲೂಗಳನ್ನು ನೆಲದ ಹಿಮಹಾಸಿನಿಂದ ಕತ್ತರಿಸಿ ತೆಗೆದ ಗಟ್ಟಿ ಹಿಮದ ಇಟ್ಟಿಗೆಗಳನ್ನು ಜೋಡಿಸಿ ನಿರ್ಮಿಸಲಾಗುತ್ತದೆ. ಅರ್ಧ ಗೋಳದ ಆಕಾರ, ಒಂದೇ ಕೊಠಡಿ, ಅದರ ಒಳಹೋಗಲು ಮತ್ತು ಹೊರಬರಲು ಕುಳ್ಳಾಗಿ ಚಾಚಿದ ಒಂದೇ ದ್ವಾರ ಇದು ಇಗ್ಲೂಗಳ ಸಾಮಾನ್ಯ ಸ್ವರೂಪ (ಚಿತ್ರ 3ರಲ್ಲಿ ಗಮನಿಸಿ). ನಿರ್ಮಿಸಿದ ಕೆಲ ದಿನಗಳಲ್ಲೇ ಹಿಮದ ಇಟ್ಟಿಗೆಗಳೆಲ್ಲ ಬೆಸೆದು ಇಡೀ ಇಗ್ಲೂ ಒಂದೇ ಹಿಮರಾಶಿಯಲ್ಲಿ ಕೊರೆದ ಗುಹೆಯಂತಾಗುತ್ತದೆ. ಚಳಿಗಾಲ ಮುಗಿದು ವಸಂತ ಬಂದೊಡನೆಯೇ ನಿಧಾನವಾಗಿ ಕರಗತೊಡಗುತ್ತದೆ. ಆದ್ದರಿಂದಲೇ ಇಗ್ಲೂಗಳು ಬಹುವಾರ್ಷಿಕ ಬಳಕೆಗೆ ಯೋಗ್ಯ ಅಲ್ಲ.

ಇಲ್ಲೊಂದು ಮುಖ್ಯ ಪ್ರಶ್ನೆ: ಶೂನ್ಯಕ್ಕಿಂತ ನಲವತ್ತು ಡಿಗ್ರಿ ಸೆಲ್ಸಿಯಸ್ ನಷ್ಟು ಕಡಿಮೆ ಉಷ್ಣತೆಯ ಪರಿಸರದಲ್ಲಿ ಹಿಮದಿಂದಲೇ ನಿರ್ಮಿಸಲಾಗುವ ಇಗ್ಲೂಗಳಲ್ಲಿ ವಾಸಿಸುವುದು ಸಾಧ್ಯ ಹೇಗೆ?

ವಿಸ್ಮಯ ಏನೆಂದರೆ ಹಿಮದಿಂದಲೇ ನಿರ್ಮಿತವಾದರೂ ಇಗ್ಲೂಗಳ ಒಳಗಿನ ತಾಪಮಾನ ಬಾಹ್ಯ ಪರಿಸರಕ್ಕಿಂತ ಬಹಳ ಹೆಚ್ಚಿರುತ್ತದೆ ! ಹೊರಗಿನ ಉಷ್ಣತೆ ಶೂನ್ಯಕ್ಕಿಂತ 40 ಡಿಗ್ರಿ ಕಡಿಮೆ ಇದ್ದರೂ ಇಗ್ಲೂಗಳ ಒಳಗಿನ ಉಷ್ಣತೆ 0 ಯಿಂದ 6 ಡಿಗ್ರಿ ಸೆಲ್ಸಿಯಸ್‌ವರೆಗೂ ಬೆಚ್ಚಗೆ ಇರುತ್ತದೆ! ಅದಕ್ಕೆ ಮುಖ್ಯ




ಕಾರಣ ಹಿಮದ ಶಾಖ ಅವಾಹಕ ಗುಣ. ಇಗ್ಲೂಗಳೊಳಗೆ ವಾಸಿಸುವ ಜನರ ದೇಹ ಶಾಖ, ಅವರು ಬೆಳಕಿಗಾಗಿ ಉರಿಸುವ ದೀಪದ ಶಾಖ ಮತ್ತು ಅಡುಗೆ ಒಲೆಯ ತಾಪ ಇವೆಲ್ಲ ಇಗ್ಲೂಗಳ ಒಳಗಿನ ಗಾಳಿಯನ್ನು ಬೆಚ್ಚಗಾಗಿಸುತ್ತವೆ. ಈ ತಾಪ ಹೊರಕ್ಕೆ ಹರಿದುಹೋಗದಂತೆ ಇಗ್ಲೂದ ಹಿಮ ಒಳಗೇ ತಡೆಯುತ್ತದೆ. ಆದ್ದರಿಂದಲೇ, ಎಂಥ ಕೊರೆವ ಚಳಿಯಲ್ಲೂ ಇಗ್ಲೂಗಳ ಒಳಗೆ ತಾಪ ಸಹ್ಯವೆನಿಸುವ ಮಟ್ಟದಲ್ಲೇ ಉಳಿಯುತ್ತದೆ. ಇದೇ ಕಾರಣದಿಂದಲೇ ಆರ್ಕ್ಟಿಕ್ ನಲ್ಲಿ ಹೆಣ್ಣು ಹಿಮ ಕರಡಿಗಳು ಪ್ರಸವಕಾಲ ಸಮೀಪವಾಗುತ್ತಿದ್ದಂತೆ ಹಿಮರಾಶಿಯಲ್ಲಿ ಗುಹೆಯೊಂದನ್ನು ತೋಡಿ ತೆಗೆದು ಅದರೊಳಗೇ ಉಳಿದು ಮರಿಗಳಿಗೆ ಜನ್ಮ ನೀಡಿ ಕೆಲ ತಿಂಗಳುಗಳ ಕಾಲ ಅಲ್ಲೇ ಇದ್ದು ಮರಿಗಳು ಶಕ್ತರಾದ ನಂತರ ಹೊರಕ್ಕೆ ಬರುತ್ತವೆ.

■ ಎನ್. ವಾಸುದೇವ್